# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು – 572 103

ಸಂಖ್ಯೆ:ತು.ವಿ:ಶೈ.ವಿ:ಪಿ.ಜಿ:2024–25/3683 ದಿನಾಂಕ:04.03.2025

## ಸುತ್ತೋಲೆ

ವಿಷಯ: ಸ್ನಾತಕೋತ್ತರ ಎಂ.ಬಿ.ಎ, ಎಂ.ಬಿ.ಎ (ಫೈನಾನ್ಸ್), ಎಂ.ಸಿ.ಎ ಮತ್ತು ಎಲ್.ಎಲ್.ಎಂ ಪದವಿ ಕೋರ್ಸ್‌ಗಳ ವಿದ್ಯಾರ್ಥಿಗಳ ಪ್ರವೇಶಾನುಮೋದನೆ ಕುರಿತು.

ಉಲ್ಲೇಖ:1. ಕುಲಸಚಿವರು(ಪರೀಕ್ಷಾಂಗ)ತು.ವಿ.ತು ಇವರ ಸುತ್ತೋಲೆ ಪತ್ರ ದಿನಾಂಕ:20.11.2024

2. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:10.01.2025 (ಕಂಡಿಕೆ–26)

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(01) ರ ಸುತ್ತೋಲೆಯಲ್ಲಿ ಮಾಹಿತಿ ತಂತ್ರಜ್ಞಾನದ ಬಳಕೆಯ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಸುಧಾರಣೆಗಳನ್ನು ತರುವ ಪ್ರಯತ್ನದಲ್ಲಿ ಭಾರತ ಸರ್ಕಾರವು ನ್ಯಾಷನಲ್ ಅಕಾಡೆಮಿಕ್ ಡೆಪೋಸಿಟರಿ(NAD) ಎಂಬ ಶೈಕ್ಷಣಿಕ ದಾಖಲೆಗಳ ಕೇಂದ್ರೀಕೃತ ಡಿಜಿಟಲ್ ಡೆಪೋಸಿಟರಿಯನ್ನು ಸ್ಥಾಪಿಸಿದ್ದು ವಿದ್ಯಾರ್ಥಿಗಳು ಎಲೆಕ್ಟ್ರಾನಿಕ್ ರೂಪದಲ್ಲಿ ಅಗತ್ಯವಾದ ಹಾಗೂ ಕಾನೂನುಬದ್ಧವಾದ ಶೈಕ್ಷಣಿಕ ದಾಖಲೆಗಳನ್ನು ಪಡೆಯಲು ಅನುವು ಮಾಡಲಾಗಿದ್ದು, ಈ ಸಂಬಂಧ ಅಧ್ಯಕ್ಷರು / ಸಂಯೋಜಕರು, ಸ್ನಾತಕೋತ್ತರ ವಿಭಾಗಗಳು ಮತ್ತು ಎಲ್ಲಾ ಪ್ರಾಂಶುಪಾಲರು ಸ್ನಾತಕ / ಸ್ನಾತಕ ಶಿಕ್ಷಣ ಮಹಾವಿದ್ಯಾಲಯಗಳು ತುಮಕೂರು, ಇವರು ವಿದ್ಯಾರ್ಥಿಗಳಿಗೆ National Academic Depository (NAD) ಮತ್ತು Digilocker ನಲ್ಲಿ ಆನ್‌ಲೈನ್ ಮೂಲಕ ಪಡೆದಿರುವ ಅಂಕಪಟ್ಟಿಗಳನ್ನು ತಾವೇ ದೃಡೀಕರಿಸಿ ಪದವಿಯ ಪ್ರವೇಶಾನುಮೋದನೆಗೆ ತಮ್ಮ ಹಂತದಲ್ಲಿ ಕ್ರಮವಹಿಸುವಂತೆ ತಿಳಿಸಿರುತ್ತಾರೆ.

ಆದ್ದರಿಂದ ಸ್ನಾತಕೋತ್ತರ ಎಂ.ಬಿ.ಎ, ಎಂ.ಬಿ.ಎ (ಫೈನಾನ್ಸ್), ಎಂ.ಸಿ.ಎ ಮತ್ತು ಎಲ್.ಎಲ್.ಎಂ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ವಿದ್ಯಾರ್ಥಿಗಳ ಅಗತ್ಯ ದಾಖಲಾತಿಗಳನ್ನು National Academic Depository (NAD) ಮತ್ತು Digilockerನಲ್ಲಿ ಪರಿಶೀಲಿಸಲು ಅಗತ್ಯವಿರುವ NAD ಮತ್ತು Digilocker ನ Login ID ಮತ್ತು Passwordನ್ನು ಪರೀಕ್ಷಾ ವಿಭಾಗದಿಂದ ಪಡೆದುಕೊಂಡು ವಿದ್ಯಾರ್ಥಿಗಳ ಅಂಕಪಟ್ಟಿಗಳನ್ನು ತಮ್ಮ ವಿಭಾಗ / ಕಾಲೇಜುಗಳಲ್ಲಿ ಪರಿಶೀಲಿಸಿ ಧೃಡೀಕರಿಸಿಕೊಂಡು **ವಿದ್ಯಾರ್ಥಿಗಳ ಮೂಲ ದಾಖಲೆಗಳನ್ನು ದಿನಾಂಕ:05.03.2025 ರಿಂದ 11.03.2025 ರೊಳಗಾಗಿ ಮುದ್ದಾಂ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿ ಕಡ್ಡಾಯವಾಗಿ ಪ್ರವೇಶಾನುಮೋದನೆ ಪಡೆಯುವಂತೆ ಈ ಮೂಲಕ ತಿಳಿಸಲಾಗಿದೆ.**

ಆದೇಶದ ಮೇರೆಗೆ

S. Srinivasan 4/3

ಉಪಕುಲಸಚಿವರು

ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

1. ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ರವರಿಗೆ ಪ್ರವೇಶಾನುಮೋದನೆಗೆ ಅನುವು ಮಾಡಿಕೊಡುವಂತೆ ಕೋರಲಾಗಿದೆ.
2. ಅಧ್ಯಕ್ಷರು / ಸಂಯೋಜಕರು, ಸಂಬಂಧಿಸಿದ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಪ್ರಾಂಶುಪಾಲರು, ಸಂಬಂಧಿಸಿದ ಸಂಯೋಜಿತ ಸ್ನಾತಕೋತ್ತರ ಪದವಿ ಕಾಲೇಜುಗಳು, ತುಮಕೂರು. ವಿಶ್ವವಿದ್ಯಾನಿಲಯ, ತುಮಕೂರು
4. ಸಂಯೋಜಕರು, ಶಿರಾ ಸ್ನಾತಕೋತ್ತರ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ಭುವನಹಳ್ಳಿ, ಶಿರಾ
5. ಸಂಯೋಜಕರು, ಸ್ನಾತಕೋತ್ತರ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತಿಪಟೂರು.

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ,
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು
3. ಕಚೇರಿ ಪ್ರತಿ.